10

# “ನಿನ್ನ ಮಗನು ಬದುಕುತ್ತಾನೆ”

## (4:46-54)

1977ರ ಶರತ್ಕಾಲದ ಒಂದು ವಾರಾಂತ್ಯದಲ್ಲಿ, ಹಾರ್ಡಿಂಗ್ ಕಾಲೇಜಿನಲ್ಲಿ ನನ್ನ ಸೀನಿಯರ ವರ್ಷದ ಪ್ರಾರಂಭದಲ್ಲಿ ಹಲವಾರು ವಿದ್ಯಾರ್ಥಿಗಳು ಅರ್ಕನ್ಸಾಸಿನ ಸಿಯರ್ಸಿಯಿಂದ ಅಲಾಬಾಮಾದ ಫ್ಲೋರೆನ್ಸಿಗೆ ಆತ್ಮಗಳನ್ನು-ಗೆಲ್ಲುವ ಕಾರ್ಯಗಾರಕ್ಕಾಗಿ ಪ್ರಯಾಣ ಮಾಡಿದವು, ಆ ವಾರಾಂತ್ಯದಲ್ಲಿ ನಾನು ಕೇಳಿದ ಮತ್ತು ಅನುಭವಿಸಿದ ಎಲ್ಲಾ ಅದ್ಭುತಕರವಾದ ಸಂಗತಿಗಳಲ್ಲಿ ಓಟಿಸ್ ಗೇಟ್‌ವುಡ್ ಅವರು ಕೊಟ್ಟ ಭಾಷಣಕ್ಕಿಂತ ಹೆಚ್ಚು ಬಲವಾದದ್ದು ಬೇರಾವುದು ಇರಲಿಲ್ಲ. ಅವರು ವಯಸ್ಸಾದ ಮಿಶನರಿಯು ಮತ್ತು ಅಲ್ಲಿ ಕೂಡಿ ಬಂದಿದ್ದ ನಮ್ಮಲ್ಲಿ ಕೆಲವರಿಗೆ ಶೂರರೂ ಆಗಿದ್ದರು. ಮಿಶನ್ ಫೀಲ್ಡಿನಲ್ಲಿ ಮೂವತ್ತಕ್ಕಿಂತ ಹೆಚ್ಚು ವರ್ಷಗಳವರೆಗೆ ಕಷ್ಟಗಳನ್ನು ತೊಂದರೆಗಳನ್ನು ಅನುಭವಿಸಿದ್ದರ ಬಗ್ಗೆ ಮಾತನಾಡಲು ಅವರನ್ನು ಕೇಳಿಕೊಳ್ಳಲಾಗಿತ್ತು. ಸುವಾರ್ತೆಯನ್ನು ಪ್ರಸಾರ ಮಾಡುವದರಲ್ಲಿ ಏಕಾಂಗಿಕತೆ, ಸಹೋದರರಿಂದ ವಿರೋಧ, ಸರಕಾರಗಳಿಂದ ಹಿಂಸೆ, ಪ್ರಿಯರ ಹಾಗೂ ಜೊತೆ ಕೆಲಸದವರ ಮರಣ, ಮತ್ತು ಪ್ರೀತಿಯ ತಮ್ಮ ಕೆಲಸಕ್ಕಾಗಿ ಸಹಿಸಿದ ಇತರ ಶ್ರಮೆಗಳ ಬಗ್ಗೆ ಅವರು ಆ ರಾತ್ರಿ ಮಾತನಾಡಿದರು.

ಸಹೋದರ ಗೇಟ್ಸ್‌ವುಡ್ ಅವರು ಯುರೋಪಿನಲ್ಲಿಯ ತಮ್ಮ ಕೆಲಸದ ಜೀವನದ ಸ್ಮರಣೆಗಳನ್ನು ಹಂಚಿಕೊಂಡಿದ್ದನ್ನು ಕೇಳಿದಾಗ ನಾವು ದಿಗ್ಭಂಧಿತರಾದವು. ಆದರೆ ನಾನು ಅತೀ ಹೆಚ್ಚಾಗಿ ಜ್ಞಾಪಕದಲ್ಲಿಟ್ಟುಕೊಂಡಂಥದ್ದು ಆ ಸಾಯಂಕಾಲ ಅವರು ಉಪಯೋಗಿಸಿದ ವಾಕ್ಯ: ಯೋಹಾನ 4:46-54. ಚಾರ್ಲಸ್ ಕೊಯಿಲ್, ಇಂಟರ್ ನ್ಯಾಶನಲ್ ಬೈಬಲ್ ಕಾಲೇಜಿನ ಪ್ರೆಸಿಡೆಂಟರು ಹಾಗೂ ಲೆಕ್ಚರಶಿಪ್ಪದ ಡೈರೆಕ್ಟರು, ಸಹೋದರ ಗೇಟ್ ವುಡ್‌ರನ್ನು ಮಾತನಾಡಲಿಕ್ಕೆ ಆಮಂತ್ರಿಸಿದ್ದರು ಮತ್ತು ಅವರು ಮಾತನಾಡುವುದಕ್ಕೆ ಈ ವಚನವು ಯೋಗ್ಯವಾಗಿದೆ ಎಂದು ಸೂಚಿಸಿದ್ದರು. “ವಾಕ್ ಆನ್ ಥ್ರೂ ದ ನೈಟ್” ಎಂದು ಕರೆಯಲ್ಪಟ್ಟ ಆ ಪ್ರಸಂಗವು, ಅಂದಿನಿಂದ ನನ್ನ ಅನೇಕ ತೊಂದರೆಗಳ ಕಡೆಗೆ ನೋಡಿದ ಮಾರ್ಗದ ತಳಹದಿಯಾಗಿ ರೂಪಿಸಲ್ಪಟ್ಟಿದೆ. ಈ ವಾಕ್ಯವನ್ನು ವೈಯಕ್ತಿಕ ಬೈಬಲ್ ಅಧ್ಯಯನಗಳಲ್ಲಿಯ ಜನರೊಂದಿಗೆ ಹಂಚಿಕೊಂಡಿದ್ದೇನೆ ಮತ್ತು ಸಮಾಧಿ ಬಳಿಯಲ್ಲಿಯ ಕುಟುಂಬಗಳಿಗಾಗಿ ಅವರು ತಮ್ಮ ಜೀವನದ ಅತೀ ಕಠಿಣವಾದ ದಿನಗಳನ್ನು ಎದುರಿಸುತ್ತಿರುವಾಗ ಅದನ್ನು ಓದಿದ್ದೇನೆ. ಅದು ಸುಂದರವಾದ, ಬಲವಾದ, ಆಹ್ವಾನಿಸುವಂಥ ಮತ್ತು ಆದರಣೆ ಕೊಡುವಂಥ ವಚನವಾಗಿದೆ; ಮತ್ತು ಅದು ಈ ಪಾಠದ ತಳಹದಿಯಾಗಿದೆ.

### ಹತಾಶನಾದ ತಂದೆ (4:46, 47)

ಸಮಾರ್ಯದವರೊಂದಿಗೆ ತನ್ನ ಸಂದರ್ಶನದ ನಂತರ, ಯೇಸುವು ಗಲಿಲಾಯಕ್ಕೆ ಹಿಂದಿರುಗಿದನು. ಅಲ್ಲಿ ಆತನು ಒಬ್ಬ ಹೆಚ್ಚುತ್ತಿರುವ ಪ್ರಸಿದ್ಧ ವ್ಯಕ್ತಿಯಾಗಲಿಕ್ಕಿದ್ದನು. ತನ್ನ ಪ್ರಥಮ ಸೂಚಕ ಕಾರ್ಯದ ಸ್ಥಳವಾದ ಕಾನಾ ಊರಿಗೆ ಹಿಂದಿರುಗಿದನು. ತನ್ನ ಮಗನ ಪ್ರಾಣಕ್ಕಾಗಿ ಬೇಡಿಕೊಳ್ಳಲು ಬಂದ ಅರಮನೆಯ ಒಬ್ಬ ಪ್ರಧಾನನಿಂದ ಯೇಸುವು ಸಂದರ್ಶಿಸಲ್ಪಟ್ಟನು, ಈ ಇಬ್ಬರ ಮಧ್ಯದಲ್ಲಿಯ ವಿನಿಮಯವು ವಿಶ್ವಾಸದ ಪಯಣದಲ್ಲಿ ನಮಗಾಗಿ ಇನ್ನೊಂದು ಮಾದರಿಯಾಗಿ ಕಾರ್ಯ ಮಾಡುತ್ತದೆ.

ಅರಮನೆಯ ಅಧಿಕಾರಿಯ ಸ್ಥಾನ ಇಲ್ಲವೇ ರಾಜಕೀಯದ ಸ್ಪಷ್ಟತೆಯ ಬಗ್ಗೆ ನಮಗೇನೂ ತಿಳಿದಿರುವದಿಲ್ಲ. ಚತುರಧಿಪತಿಯಾದ ಹೆರೋದನ ಆಡಳಿತೆಯಲ್ಲಿ ಅವನು ಒಳಗೊಂಡಿದ್ದರ ಬಗ್ಗೆ ನಮಗೆ ತಿಳಿದಿರುವದಿಲ್ಲ. ಈ ಹೆರೋದನು ಹೆರೋದ ಅಂತಿಪನೆಂದು ಪ್ರಸಿದ್ಧನಾಗಿದ್ದನು, ಇವನು ಸ್ನಾನಿಕನಾದ ಯೋಹಾನನ ಶಿರಚ್ಛೇದನ ಮಾಡಲು ಅಪ್ಪಣೆಕೊಟ್ಟನು. ಅಧಿಕಾರದಲ್ಲಿರುವವ ರೊಂದಿಗೆ ವಿಶೇಷ ಸಂಬಂಧಗಳನ್ನು ಹೊಂದಿದವನಾದ್ದರಿಂದ ಈ ಪ್ರಧಾನದ ಮಹತ್ವದ ಪ್ರಭಾವವುಳ್ಳ ಮನುಷ್ಯನಾಗಿದ್ದನೆಂದು ನಾವು ಊಹಿಸ ಬಹುದು.

ಈ ಅಧಿಕಾರಿ ಯೇಸುವನ್ನು ಬೇಟಿಯಾದನು, ಕಾನಾವು ಬಹುಶಃ ಬಾಲಕನು ಅಸ್ವಸ್ಥತೆಯಿಂದ ಮಲಗಿದ್ದ ಸ್ಥಳ ಕಪೆರ್ನೌಮಿನಿಂದ ಸುಮಾರು ಇಪ್ಪತ್ತು ಮೈಲು ದೂರದಲ್ಲಿತ್ತು. ಆ ಮನುಷ್ಯನು ಯೇಸುವು ಕಾನಾದಲ್ಲಿ ಇದ್ದಾನೆಂದು ಕೇಳಿದಾಗ, “ಮರಣ ಹಾಸಿಗೆಯಲ್ಲಿರುವ” (4:47). ತನ್ನ ಮಗನನ್ನು ಗುಣಪಡಿಸಲು ತನ್ನೊಂದಿಗೆ ಕಪೆರ್ನೌಮಿಗೆ ಹಿಂದಿರುಗಿ ಬರಬೇಕೆಂದು ಆತನನ್ನು ಕೇಳಲು ಬಂದನು. ಈ ಮನುಷ್ಯನ ಬಗ್ಗೆ ನನಗೆ ಹೆಚ್ಚು ತಿಳಿದಿರುವುದಿಲ್ಲ, ಆದರೆ ಇದನ್ನು ಬಲ್ಲೆನು: ಗಂಭೀರವಾಗಿ ಅಸ್ವಸ್ಥತೆಯಲ್ಲಿರುವ ಮಗುವು ಒಬ್ಬ ತಂದೆಗೆ ಇದ್ದಾಗ, ಜಗತ್ತಿನಲ್ಲಿ ಬೇರಾವ ಸಂಗತಿಯೂ ಗಣನೆಗೆ ಬರುವದಿಲ್ಲ!

ಹಲವಾರು ವರ್ಷಗಳ ಹಿಂದೆ, ನನ್ನ ಮಕ್ಕಳಲ್ಲಿ ಒಬ್ಬಳು ರಕ್ತದ ಅಂಟು ರೋಗದಿಂದ ಬಳಲುತ್ತಿದ್ದಳು. ಅಂಟಿಬಾಯೋಟಿಕ್ಸ್‌ಗಳನ್ನು ಕೊಟ್ಟರೂ ಆಕೆಯ ರೋಗ ಗುಣವಾಗಲಿಲ್ಲ, ಆದುದರಿಂದ ಮಕ್ಕಳ ವೈದ್ಯನು ಒಂದು ದಿನ ಪ್ರಾತಃಕಾಲ ರಕ್ತ ತಪಾಸಣೆಗೆ ಕಳುಹಿಸಿದನು. ಯಾರು ಏನು ಹೇಳಲಿಲ್ಲ, ಅವರು ರಕ್ತಕ್ಷಯಕ್ಕಾಗಿ ಪರೀಕ್ಷೆ ಮಾಡುತ್ತಿರುವರೆಂದು ನಮಗೆ ತಿಳಿದು ಬಂದಿತು, ಅದು ನನ್ನ ಜೀವನದ ಅತೀ ಉದ್ದವಾದ ದಿನವಾಗಿತ್ತು. ಹಿಂದಿನ ದಿವಸ ಇದದ್ದು ಕ್ಷುಲ್ಲಕ ವಿಷಯಗಳ ಕಡೆಗೆ ಕೂಡಲೇ ತಿರುಗಿತು. ನನಗೆ ಬೇಕಾದದ್ದು ನನ್ನ ಚಿಕ್ಕ ಮಗಳ ಆರೋಗ್ಯ. ಆಕೆ ಚೆನ್ನಾಗಿ ಆಗುವಳೆಂದು ರಕ್ತ ಪರೀಕ್ಷೆಯ ಪರಿಣಾಮಕ್ಕಾಗಿ ನಾನು ಕೃತಜ್ಞನಾಗಿದ್ದೇನೆ; ಆದರೆ ಆಕೆಯ ಜೀವಕ್ಕಾಗಿ ನಾನು ಭಯಪಟ್ಟಾಗ, ಜಗತ್ತು ಇಲ್ಲವಾಗಿ ಹೋದರೂ ನಾನು ಆ ದಿನವನ್ನು ಮರೆಯುವದಿಲ್ಲ.

ಪತ್ಯದಲ್ಲಿಯ ತಂದೆಯು ಹೆರೋದನಿಗಾಗಿ ಕೆಲಸ ಮಾಡುತ್ತಿದ್ದನು, ಹೀಗೆ ಅವನನ್ನು ಒಬ್ಬ ರಾಜಕೀಯ ನೇಮಕಗೊಂಡವನಂತೆ ಎಣಿಸಲ್ಪಡುತ್ತಿದ್ದನು. ಮಾರ್ಕನ ಸುವಾರ್ತೆಯು ಒಂದು ಕುತೂಹಲ ಭರಿತ ಉಲ್ಲೇಖದಲ್ಲಿ, ಹೆರೋದಿಯರು ಯೇಸುವನ್ನು ಕೊಲ್ಲುವ ಸಂಚಿನಲ್ಲಿ ಒಳಗೊಂಡಿದ್ದರೆಂಬುದನ್ನು ತೋರಿಸುತ್ತದೆ. ಯೇಸುವು ಸಬ್ಬತ್ತ ದಿನದಲ್ಲಿ ಕೈ ಬತ್ತಿ ಹೋದವನನ್ನು ಗುಣಪಡಿಸಿದ ಘಟನೆಯ ನಂತರ, ನಾವು ಹೀಗೆ ಓದುತ್ತೇವೆ. “ಫರಿಸಾಯರು ಹೊರಕ್ಕೆ ಹೋಗಿ ಕೂಡಲೇ *ಹೆರೋದ್ಯರನ್ನು* ಕೂಡಿಕೊಂಡು ಇವನನ್ನು ಯಾವ ಉಪಾಯದಿಂದ ಕೊಲ್ಲೋಣ ಎಂದು ಆತನಿಗೆ ವಿರೋಧವಾಗಿ ಆಲೋಚನೆ ಮಾಡಿಕೊಂಡರು” (ಮಾರ್ಕ 3:6; ಒತ್ತಿ ಹೇಳಿ ದ್ದು ನನ್ನದು). ಈ ಕಥೆಯಲ್ಲಿಯ ತಂದೆಯು ಒಂದು ಹಂತದಲ್ಲಿ ಯೇಸುವಿನ ಮರಣಕ್ಕಾಗಿ ಹುಡುಕಿದ್ದವನಾಗಿರುವ ಸಾಧ್ಯತೆ ಇದೆ. ಹೀಗಿದ್ದರೂ, ಅದು ರಾಜಕೀಯ ಕಾರಣವಾಗಿತ್ತು; ಒಂದು ಮಗುವು ಸಾಯುತ್ತಿರುವಾಗ, ರಾಜಕೀಯವು ಅಡ್ಡ ಬರುವದಿಲ್ಲ!

ಅಂಥದೇ ಒಂದು ಪರಿಸ್ಥಿತಿಯು 1981ರಲ್ಲಿ ಯು. ಎಸ್. ಪ್ರೆಸಿಡೆಂಟ್ ರೊನಾಲ್ಡ್ ರೇಗನ್ ಅವರು ಗುಂಡಿನಿಂದ ಹೊಡೆಯಲ್ಪಟ್ಟು, ಆಸ್ಪತ್ರೆಗೆ ಒಯ್ಯಲ್ಪಟ್ಟಾಗ ಸಂಭವಿಸಿತು. ಅವರು ಬೇಗನೇ ಶಸ್ತ್ರಚಿಕಿತ್ಸೆಗೆ ಸಿದ್ಧಗೊಳಿಸಲ್ಪಟ್ಟರು ಮತ್ತು ಅಪರೇಟಿಂಗ್ ರೂಮಿನೊಳಗೆ ಒಯ್ಯಲ್ಪಟ್ಟರು. ತನ್ನ ಸರ್ಜನ್ಸ್‌ರನ್ನು ನೋಡಿ, ಪ್ರೆಸಿಡೆಂಟರು ತನ್ನ ಆಕ್ಸಿಜೆನ್ ಮಾಸ್ಕನ್ನು ತೆಗೆದು ತನ್ನ ಕಲ್ಪಿತ ಹಾಸ್ಯದಿಂದ, “ನೀವು ಒಬ್ಬ ರಿಪಬ್ಲಿಕನ್ ಅಲ್ಲವೇ?” ಎಂದು ಕೇಳಿದರು. ವೈದ್ಯರ ಉತ್ತರವು ಆಕ್ಸಿಜೆನ್ ಮಾಸ್ಕನ್ನು ಪುನಃ ಇಟ್ಟು, “ಮಿಸ್ಟರ್ ಪ್ರೆಸಿಡೆಂಟ್, ನಾವು ಇಂದು ಎಲ್ಲರೂ ರಿಪಬ್ಲಿಕ್‌ನ್ನರೇ” ಎಂದು ಹೇಳಿ ದ್ದಾಗಿತ್ತು, ಜೀವವು ಕಷ್ಟದಲ್ಲಿದ್ದಾಗ, ಪಕ್ಷದ ಭಿನ್ನತೆಗಳು ಒಬ್ಬನ ಜೋಪಾಸನೆಯ ಹಿನ್ನೆಲೆಯಲ್ಲಿ ಬಾಡಿ ಹೋಗುತ್ತವೆ.

ಈ ವಾಕ್ಯಭಾಗದಲ್ಲಿ ನಾವು ಮುಂದೆ ಹೋಗುವ ಮೊದಲು, ತಂದೆಯ ಬೇಡಿಕೆಯ ಬಗ್ಗೆ ಇನ್ನೊಂದು ಅಂಶವನ್ನು ಹೇಳಬೇಕು. ಅವನು ಯೇಸುವಿನ ಬಳಿಗೆ ಬಂದಾಗ, ಅವನು ಬಂದು "ತನ್ನ ಮಗನನ್ನು ಗುಣಪಡಿಸಬೇಕೆಂದು ಯೇಸುವನ್ನು ಬೇಡಿಕೊಳ್ಳುತ್ತಿದ್ದನು." ಗ್ರೀಕ್ ಕ್ರಿಯಾಪದದ ಕಾಲವು ಅಪರಿಪೂರ್ಣ ಕಾಲವಾಗಿದೆ, ಇದು ಸತತವಾದ ಕಾರ್ಯವನ್ನು ತೋರಿಸುತ್ತದೆ. ಈ ಅಧಿಕಾರಿಯು, ಬಹುಶಃ ಜನರ ಕಣ್ಣಿನಲ್ಲಿ ಒಬ್ಬ ಮಹತ್ವದ ವ್ಯಕ್ತಿಯಾಗಿದ್ದನು, ತನ್ನ ಮಗನ ಜೀವ ಉಳಿಸಬೇಕೆಂದು ಯೇಸುವನ್ನು ಬೇಡಿಕೊಳ್ಳುತ್ತಿದ್ದನು ಎಂದು ಬೇರೆ ಮಾತುಗಳಲ್ಲಿ ಹೇಳಬಹುದು. ಇದು ಅವನ ಕೊನೆಯ ನಿರೀಕ್ಷೆಯಾಗಿತ್ತು, ಆದುದರಿಂದ ತನ್ನ ಗರ್ವವನ್ನು ಬದಿಗಿಟ್ಟು, ತನ್ನ ಮಗನ ಪ್ರಾಣಕ್ಕಾಗಿ ಈ ಚರ್ಚಾಸ್ಪದವಾದ, ಹಣವಿಲ್ಲದ ರಬ್ಬಿಯನ್ನು ಬೇಡಿಕೊಳ್ಳುತ್ತಿದ್ದನು.

## ಚಿಂತಿಸುವ ರಕ್ಷಕನು (4:48-50)

ಬಾಲಕನ ತಂದೆಯ ಬೇಡಿಕೆಯನ್ನು ಯೇಸುವು ಕೇಳಿದಾಗ, ಆತನು ಮೊದಲನೆಯ ಪ್ರತಿಕ್ರಿಯೆಯ ಸಮೀಪದಲ್ಲಿ ನಿಂತಿದ್ದ ಜನರನ್ನು ಗದರಿಸುವುದಾಗಿತ್ತು. "ನೀವು ಸೂಚಕ ಕಾರ್ಯಗಳನ್ನೂ, ಅದ್ಭುತ ಕಾರ್ಯಗಳನ್ನೂ ನೋಡದಿದ್ದರೆ ನಂಬುವದೇ ಇಲ್ಲ" (4:48) ಎಂದು ಆತನು ಹೇಳಿದನು. ಯೇಸುವಿನ ಅವಸರದ ಪ್ರತಿಕ್ರಿಯೆಯಿಂದ ನಾವು ಆಘಾತ ಹೊಂದಿದವರಾಗುತ್ತೇವೆ. ನಮ್ಮ ಕರ್ತನಿಂದ ಕೋಮಲತೆಯನ್ನು, ದೃಢಪಡಿಸುವಿಕೆಯನ್ನು, ಮತ್ತು ನಿರೀಕ್ಷೆಯು ಬರುವದನ್ನು ನೋಡಲು ನಿರೀಕ್ಷಿಸುತ್ತೇವೆ. ಅದರ ಬದಲು, ಗದರಿಸುವಿಕೆಯನ್ನು ಕಂಡುಕೊಳ್ಳುತ್ತೆವೆ. ಪುನಃ ನಾವು ಯೇಸುವು ಜನರನ್ನು ನಂಬಿಕೆಯ ಕಡೆಗೆ ನಡಿಸುವದನ್ನು ಮತ್ತು ಬಹಳ ಸಾಮಾನ್ಯವಾಗಿದ್ದ ನಂಬಿಕೆಯ ಕೀಳುದರ್ಜೆಯ ಕಪಟಿಗಳೊಂದಿಗೆ ಅವರು ಇರಬಾರದು ಎಂದು ಒತ್ತಿ ಹೇಳುವುದನ್ನು ಕಂಡುಕೊಳ್ಳುತ್ತೇವೆ.[2]

ಯೇಸುವಿನ ಗದರಿಸುವಿಕೆಯು ಇತರರಿಗೆ ಸಹಾಯ ಮಾಡುವ ಹೆಸರಿನಲ್ಲಿ ನಾವು ಏನು ಮಾಡಬೇಕೆಂದು ಯೋಚಿಸುವದಕ್ಕೆ ಕಾರಣವಾಗಬೇಕು. ಸತ್ಯವನ್ನು ಅನುಸರಿಸಲಿಕ್ಕೋ ಇಲ್ಲವೇ ಸುಖವನ್ನು ಅನುಸರಿಸಲಿಕ್ಕೆ ಹೆಚ್ಚು ಸಮರ್ಪಿಸಿಕೊಂಡಿದ್ದೇವೆಯೋ? ಜನರು ನಂಬುವದಕ್ಕೆ ಇಲ್ಲವೇ ಅವರು ತಮ್ಮ ಮಾನಸಿಕ ಅಸೌಖ್ಯದಿಂದ ಬಿಡುಗಡೆ ಹೊಂದುವದಕ್ಕೆ ನಾವು ಹೆಚ್ಚು ಚಿಂತಿತರಾಗಿರುವೆವೋ? ಹೆನ್ರಿ ನೌವೆನ್‌ರಿಂದ ಈ ಕೆಳಗಿನ ಮಾತುಗಳಿಂದ ನಾನು ಬಹಳ ಸಲ ಎಚ್ಚರಿಸಲ್ಪಟ್ಟಿದ್ದೇನೆ ಮತ್ತು ಗದರಿಸಲ್ಪಟ್ಟಿದ್ದೇನೆ:

> ಒಬ್ಬ ಸಭಾ ಸೇವಕನು ನೋವನ್ನು ತೆಗೆದು ಹಾಕುವುದು ಪ್ರಾಥಮಿಕ ಕಾರ್ಯವಾಗಿರುವ ಒಬ್ಬ ವೈದ್ಯನಾಗಿರುವದಿಲ್ಲ. ...
>
> ಬಹುಶಃ ಸಭಾ ಸೇವಕನ ಮುಖ್ಯ ಕರ್ತವ್ಯವು ತಪ್ಪಾದ ಕಾರಣಗಳಿಗಾಗಿ ಶ್ರಮೆ ಪಡುವದರಿಂದ ಜನರನ್ನು ತಡೆಯುವುದಾಗಿದೆ. ಅನೇಕ ಜನರು ತಮ್ಮ ಜೀವಿತಗಳನ್ನು ತಳಹದಿಯಾಗಿಟ್ಟು ಕೊಂಡ ಸುಳ್ಳು ಕಲ್ಪನೆಯ ಕಾರಣದಿಂದ ಶ್ರಮೆ ಪಡುತ್ತಾರೆ. ಆ ಕಲ್ಪನೆಯು ಭಯವಿರಬಾರದು ಇಲ್ಲವೇ ಏಕಾಂಗಿ ಕತೆಯಿರಬಾರದು, ಗಲಿಬಿಲಿ ಇರಬಾರದು ಇಲ್ಲವೇ ಸಂಶಯವಿರಬಾರದು ಎಂಬುದೇ. ಆದರೆ ಈ ಶ್ರಮೆಗಳು, ನಮ್ಮ ಮಾನವ ಸ್ಥಿತಿಗೆ ಗಾಯಗಳು ಸಂಪೂರ್ಣವಾದವುಗಳಂತೆ ಅರ್ಥ ಮಾಡಿಕೊಳ್ಳಲ್ಪಡುವಾಗ ಸೃಜನಾತ್ಮಕವಾಗಿ, ಸಹಿಸಲ್ಪಡಬಹುದು, ಆದುದರಿಂದ ಸಭಾ ಸೇವೆಯು ಬಹಳ ಎದುರಿಸುವ ಸೇವೆಯಾಗಿರುತ್ತದೆ. ಅದು ಜನರನ್ನು ಅಮರತ್ವದ ಹಾಗೂ ಪರಿಪೂರ್ಣತೆಯ ಭ್ರಮೆಗಳಿಂದ ಜೀವಿಸುವದಕ್ಕೆ ಬಿಡುವದಿಲ್ಲ. ಅದು ಇತರರಿಗೆ ಅವರು ಮರ್ತ್ಯರು ಹಾಗೂ ಮುರಿಯಲ್ಪಟ್ಟವರು ಎಂಬುದನ್ನು ಜ್ಞಾಪಿಸುತ್ತಲೇ ಇರುತ್ತವೆ, ಮತ್ತು ಈ ಪರಿಸ್ಥಿತಿಯ ಗುರುತಿಸುವಿಕೆಯಿಂದ, ಬಿಡುಗಡೆಯು ಪ್ರಾರಂಭವಾಗುತ್ತದೆ.[3]

ಯೇಸುವು ಶ್ರಮೆ ಪಡುತ್ತಿದ್ದ ತಂದೆಗಾಗಿ ಮತ್ತು ಸಾಯುತ್ತಿದ್ದ ಅವನ ಮಗನಿಗಾಗಿ

ಆಳವಾಗಿ ಚಿಂತಿಸಿದನೆಂದು ನಾನು ನಂಬುತ್ತೇನೆ, ಆದರೆ ಆತನು ಇನ್ನೂ ಹೆಚ್ಚಾಗಿ ದೇವ ರೊಂದಿಗೆ ಅವರ ಸಂಭಂದದ ಬಗ್ಗೆ ಆಸಕ್ತಿಯುಳ್ಳವನಾಗಿದ್ದನೆಂದೂ ನಂಬುತ್ತೇನೆ. ಮಗುವು ಗುಣಪಡಿಸಲ್ಪಡಬೇಕು ಮತ್ತು ತಂದೆಯ ಹೃದಯವು ಮುರಿಯಲ್ಪಡಬಾರದು ಎಂದು ಯೇಸು ಬಯಸಿದನು, ಆದರೆ ಯೇಸುವು ತಪ್ಪಿಹೋದ ಜನರು ಇನ್ನೂ ಹೆಚ್ಚಾಗಿ ರಕ್ಷಿಸಲ್ಪಡಬೇಕೆಂದು ಬಯಸಿದನು. ಆ ದಿನದಂದು ರಾಜ್ಯದ ಅಧಿಕಾರಿಯ ಜೀವನದಲ್ಲಿ ಅತೀ ದೊಡ್ಡ ಅಗತ್ಯತೆಯು ದೈಹಿಕ ಮರಣದಿಂದ ಬಿಡುಗಡೆಯು ಆಗಿರಲಿಲ್ಲ! ಆದರೆ ಅದು ದೇವರಾಗಿತ್ತು ಎಂದು ಯೇಸುವು ನೋಡಿದನು! ಒಬ್ಬ ಮಗನ ಸಾಧ್ಯವಾದ ಮರಣವು ಈ ಮನುಷ್ಯನನ್ನು ಅವನ ಅತೀ ದೊಡ್ಡ ಅಗತ್ಯತೆಯನ್ನು ತರೆದಿಟ್ಟಿತು ಎಂಬುದನ್ನು ಯೇಸುವು ನೋಡಿದನು.

ಕಥೆಯನ್ನು ಮುಂದುವರಿಸುವ ಮೊದಲು, ಈ ಸಮಯದಲ್ಲಿ ನಮ್ಮ ಅತೀ ಹೆಚ್ಚು ಒತ್ತಡವಿರುವ ಚಿಂತನೆಯು ಯಾವುದಾಗಿರುವುದು ಎಂದು ನಮ್ಮನು ಕೇಳಿಕೊಳ್ಳುವ ಅಗತ್ಯತೆಯಿದೆ. ನಿಮ್ಮ ಮನಸ್ಸಿನಲ್ಲಿ ಈಗ ಯಾವ ವಿಷಯವು ತೂಗುತ್ತಿರುವುದು? ಅದು ನಿನಗೆ ಮಹತ್ವದಾಗಿದ್ದರೂ, ಅದು ಬಹುಶಃ ನಿನ್ನ ಅತೀ ದೊಡ್ಡ ಅಗತ್ಯತೆಯಾಗಿಲ್ಲದಿರ ಬಹುದು. ಹೀಗಿದ್ದರೂ, ಅದು ನಿನ್ನ ಅತೀ ದೊಡ್ಡ ಅಗತ್ಯತೆಯನ್ನು ಗುರುತಿಸಲು - ನಿನ್ನ ಹೃದಯವನ್ನು ದೇವರಿಗೆ ತೆರೆಯಲು ಬಹಳವಾಗಿ ಸಹಾಯ ಮಾಡಬಹುದು.

ಕೇಳುಗರನ್ನು ಯೇಸುವು ಗದರಿಸಿದ್ದು, "ಸ್ವಾಮೀ, ನನ್ನ ಮಗನು ಸಾಯುವದಕ್ಕೆ ಮುಂಚೆ ನೀನು ಬರಬೇಕು" ಎಂದು ತಂದೆಯ ಪಟ್ಟು ಹಿಡಿದ ಬೇಡುವಿಕೆಯಿಂದ ಕಥೆಯ ಮಧ್ಯದಲ್ಲಿ ತಡೆಹಿಡಿಯಲ್ಪಟ್ಟಿತು (4:49). ಈ ಹಂತದಲ್ಲಿ ತನ್ನ ಮಗನ ಬಗ್ಗೆ ಆ ಮನುಷ್ಯನು ಮಾತಾಡಿದ ರೀತಿಯಲ್ಲಿ ಕೆಲವೊಂದು ಮಹತ್ವವಿದ್ದಿರ ಬಹುದಾಗಿದೆ. ಇಲ್ಲಿ ಅವನು *paidion* ಎಂಬ ಗ್ರೀಕ್ ಪದವನ್ನು ಉಪಯೋಗಿಸಿದನು, "ನನ್ನ ಚಿಕ್ಕ ಬಾಲಕನು" ಎಂದರ್ಥ. ಹೆಚ್ಚು ಸಾಮಾನ್ಯವಾದ *huios* "ನನ್ನ ಮಗ" ಎಂಬುದನ್ನು ಉಪಯೋಗಿಸಲಿಲ್ಲ. ಇದು 46 ಮತ್ತು 47ನೆಯ ವಚನಗಳಲ್ಲಿ ಕಂಡು ಬರುತ್ತದೆ. ಇಲ್ಲಿ ಸ್ಥಾನ ಮಾನವಾಗಲೀ - ಹುದ್ದೆಗಳಾಗಲೀ ಸೂಚಿಸಲ್ಪಟ್ಟಿರುವದಿಲ್ಲ, ಇದು ತನ್ನ "ಚಿಕ್ಕ ಬಾಲಕನ" ಜೀವಕ್ಕಾಗಿ ಬೇಡಿಕೊಳ್ಳುವ, ಮುರಿದ ಹೃದಯದ ಮನುಷ್ಯನ ಹೃದಯ ವಿಕೃತಗೊಳಿಸುವ ಚಿತ್ರವಾಗಿದೆ.

ಸ್ವಸ್ಥಪಡಿಸುವಿಕೆಯ ಮಾತುಗಳು ಅಂತಿಮವಾಗಿ ಬಂದಾಗ, ಅವು ಸರಳವಾದವುಗಳೂ ನೇರವಾದವುಗಳೂ ಆಗಿದ್ದವು. "ನಿನ್ನ ಮಗನು ಬದುಕುತ್ತಾನೆ ಹೋಗು" (4:50) ಎಂದು ಯೇಸು ಹೇಳಿದನು. ತನ್ನ ನಿಯೋಗವನ್ನು ಪೂರೈಸಲು ಆತನಿಗೆ ಕಪೆರ್ನೌಮಿಗೆ ಹೋಗಲು ಇಪ್ಪತ್ತು ಮೈಲುಗಳ ಪ್ರಯಾಣ ಮಾಡಬೇಕಾಗಿರಲಿಲ್ಲ. ಆತನು ಮಾತನ್ನು ಹೇಳಿ ದನು, ಬಾಲಕನು ಗುಣ ಹೊಂದಿದನು.

## ನಂಬಿಕೆಯ ರಾತ್ರಿ (4:50-54)

ಯೇಸುವಿನ ಮಾತಿನಿಂದ, ತಂದೆಯ ದುಸ್ವಪ್ನವು ಮುಗಿಯಿತು - ಮುಗಿಯಿತೋ? ತನ್ನ ಸ್ವಂತ ಕಣ್ಣುಗಳಿಂದ ತನ್ನ ಚಿಕ್ಕ ಬಾಲಕನು ಗುಣಹೊಂದಿದ್ದನ್ನು ನೋಡುವದರಿಂದ ಇನ್ನೂ ಇಪ್ಪತ್ತು ಮೈಲುಗಳ ಅಗಲುವಿಕೆ ಇತ್ತು. ಕೆಲವೊಂದು ಕಾರಣದಿಂದ (ಬಹುಶಃ ಅದು ತಡವಾಯಿತ್ತು[4] ಇಲ್ಲವೇ ಆ ಮನುಷ್ಯನು ಆಯಾಸಗೊಂಡಿದ್ದನು) ಅವನು ಆ ರಾತ್ರಿ ತನ್ನ ಮನೆಗೆ ಹಿಂದಿರುಗಲು ಸಾಧ್ಯವಾಗಲಿಲ್ಲ. ಮರುದಿನ ಅವನು ಹೋಗುತ್ತಿರುವಾಗ ದಾರಿಯಲ್ಲಿ ಅವನ ಸೇವಕರು ಬಂದು ಅವನ ಮಗನು ಜೀವಿಸುತ್ತಿದ್ದಾನೆ, ಚೆನ್ನಾಗಿದ್ದಾನೆ ಎಂದು ತಿಳಿಸಿದರು. ಅವನು ಸ್ವಸ್ಥನಾದ ಸಮಯದ ಬಗ್ಗೆ ಕೇಳಿದಾಗ, "ನಿನ್ನೆ ಮಧ್ಯಾಹ್ನದ ಒಂದು ಘಂಟೆಗೆ ಜ್ವರವು ಅವನನ್ನು ಬಿಟ್ಟಿತು" ಎಂದು ಅವರು ಅವನಿಗೆ ಹೇಳಿದರು (4:52). ಅವನು ಕೂಡಲೇ "ನಿನ್ನ ಮಗನು ಬದುಕುತ್ತಾನೆ" ಎಂದು ಅವನಿಗೆ ಯೇಸು ಹೇಳಿದ ಸಮಯ ಅದಾಗಿತ್ತೆಂದು ಗುರುತಿಸಿಕೊಂಡನು.

ಈ ಕಥೆಯಲ್ಲಿ ಮತ್ತು 1977ರಲ್ಲಿ ತನ್ನ ಬಲವಾದ ಪ್ರಸಂಗದಲ್ಲಿ ಓಟಿಸ್ ಗೇಟ್‌ವುಡ್ ಅವರು ಮಾತಾಡಿದ್ದರಲ್ಲಿಯ ವಿವರವು ನನ್ನನ್ನು ಆಕರ್ಷಿಸುವಂಥದ್ದು, ಬಾಲಕನ ತಂದೆಯು ತನ್ನ ಮಗನ ಒಂದು ಸ್ವಸ್ಥತೆಯ ವಾಗ್ದಾನದ ಮತ್ತು ಆ ಅದ್ಭುತಕಾರ್ಯದ ದೃಢಪಡಿಸುವಿಕೆಯ ಮಧ್ಯದಲ್ಲಿ ಒಂದು ರಾತ್ರಿಯನ್ನು ಕಳೆದನು. "ಯೇಸು ತನಗೆ ಹೇಳಿದ ಮಾತನ್ನು ನಂಬಿ ಹೊರಟು ಹೋದನು" (4:50). "ಆ ಮನುಷ್ಯನು ಯೇಸುವಿನ ಮಾತನ್ನು ನಂಬಿ, ಅಲ್ಲಿಂದ ಹೊರಟು ಹೋದನು" ಎಂದು NIV ಹೇಳುತ್ತದೆ. ತಂದೆಯ ಜೀವಿತದಲ್ಲಿ ಆ ರಾತ್ರಿಯ ಚಿತ್ರವು ನಮ್ಮೆಲ್ಲರಿಗಾಗಿ ಜೀವಿಸಿದ ಜೀವದ ಬಲವಾದ ಚಿತ್ರವಾಗಿತ್ತು; ಆ ವಾಗ್ದಾನ ಮತ್ತು ನೆರವೇರು ವಿಕೆಯ ಮಧ್ಯದ ರಾತ್ರಿಯನ್ನು ನಾವು ಸಹಿಸಿಕೊಳ್ಳುತ್ತೇವೆ.

ರಾತ್ರಿಯ ಬಗ್ಗೆ ಯಾವುದೋ ತೊಂದರೆ ಕೊಡುತ್ತದೆ ಮತ್ತು ಭಯಗಳು ದಿನದ ಬೆಳಕಿನಲ್ಲಿಯಕ್ಕಿಂತ ಹೆಚ್ಚಾಗಿ ಭಯಪಡಿಸುವಂತೆ ಕಾಣುತ್ತದೆ. ಭಯಾನಕ ಚಲನ ಚಿತ್ರಗಳು ಯಾವಾಗಲೂ ಕತ್ತಲೆಯಲ್ಲಿರುತ್ತೇವೆ; ಯಾಕಂದರೆ ನಾವು ಕತ್ತಲೆಯಲ್ಲಿ ಭಯಗೊಳ್ಳುವವ ರಾಗಿರುತ್ತೇವೆ. ಭಾರವಾದ ಸಮಸ್ಯೆಗಳ ಬಗ್ಗೆ ಕತ್ತಲೆಯಲ್ಲಿ ವಿಚಾರಿಸಲು ನನ್ನನ್ನು ಬಿಟ್ಟು ಕೊಡುವದಿಲ್ಲ. ನನಗೆ ನಿದ್ರೆ ಬಾರದಿದ್ದರೆ ಇಲ್ಲವೇ ಪ್ರತ್ಯೇಕವಾಗಿ ಭಾರವುಳ್ಳ ಭಾರದ ಬಗ್ಗೆ ಚಿಂತಿಸುತ್ತ ರಾತ್ರಿಯಲ್ಲಿ ಎಚ್ಚತ್ತುಕೊಂಡರೆ, ನಾನು ಎದ್ದು ಅಡಿಗೆಕೋಣೆಗೆ ಹೋಗಿ, ದೀಪ ಹಚ್ಚಿ, ನನ್ನ ಕಣ್ಣುಗಳನ್ನು ತೆರೆದು ನನ್ನ ಹೋರಾಟಗಳ ಮುಖಾಂತರ ಯೋಚಿಸುತ್ತೇನೆ!

ಅವನು ತನ್ನ ಮನೆಯಿಂದ ಇಪ್ಪತ್ತು ಮೈಲು ದೂರದಲ್ಲಿ ಇದ್ದುದರಿಂದ, ಈ ಅಧಿಕಾರಿಯು ನಿರೀಕ್ಷೆಗೆ ವಿರುದ್ಧವಾಗಿ ನಿರೀಕ್ಷಿಸುತ್ತ ತನ್ನ ಭಯಗಳೊಂದಿಗೆ ಹೋರಾಡುತ್ತ ರಾತ್ರಿಯನ್ನು ಕಳೆ ದನೆಂದು ನಾನು ಊಹಿಸುತ್ತೇನೆ. ಅವನು ಆಶಾಭಾವದ ಭರವಸೆಯಿಂದ ಒಂದು ಕ್ಷಣ ತೂಗಾಡಿ ದರೆ ಇನ್ನೊಂದು ಕತ್ತಲೆಯ ಸಂಶಯದ ಕಡೆಗೆ ಹೋಗುವನೆಂದು ನಾನು ಆಶ್ಚರ್ಯಪಡುತ್ತೇನೆ. ಅವನ ಹೆಸರನ್ನೂ ಸಹ ನಾವು ತಿಳಿದಿರುವದಿಲ್ಲ; ಆದರೆ ಈ ಮನುಷ್ಯನೊಂದಿಗೆ ನಾವೆಲ್ಲರೂ ಗುರುತಿಸಿಕೊಳ್ಳಬಹುದು; ವಾಗ್ದಾನ ಮತ್ತು ನೆರವೇರುವಿಕೆಯ ಮಧ್ಯದಲ್ಲಿಯ ರಾತ್ರಿ ಸಮಯದ ಹೋರಾಟವನ್ನು ನಾವೆಲ್ಲರೂ ತಿಳಿದವರಾಗಿದ್ದೇವೆ.

ಕ್ಲೌಡೆಟ್ಟೆ ಜೊನ್ಸ್ ಎಂಬ ಒಬ್ಬ ಅದ್ಭುತಕರವಾದ ಕ್ರೈಸ್ತ ಮಹಿಳೆಯು 1994, ನವಂಬರ್ 10ರಂದು ತೀರಿ ಹೋದಳು. ಆಕೆ ಕ್ಯಾನ್ಸರಿನೊಂದಿಗೆ ಬಹಳ ಹೋರಾಟ ಮಾಡಿ ಮರಣಹೊಂದಿದಳು. ಆಕೆ ತನ್ನ ಅಸ್ವಸ್ಥತೆಯನ್ನು ಸಮಾಧಾನದಿಂದಲೂ, ಆಶ್ಚರ್ಯಕರ ವಾದ ಧೈರ್ಯದಿಂದಲೂ ಎದುರಿಸಿದಳು. ಆಕೆಯ ಪತಿ, ಜೆರ್ರಿ ಮತ್ತು ಆಕೆಯ ಮಕ್ಕಳು - ತಮ್ಮ ಸ್ನೇಹಿತರೊಂದಿಗೂ ಮತ್ತು ಆಕೆಯನ್ನು ಎಂದೂ ಸಂದರ್ಶಿಸದೇ ಇದ್ದ ಅಕ್ಷರಶಃ ಸಾವಿರಾ ರು ಜನರು - ಆಕೆ ಆಶ್ಚರ್ಯಕರವಾದ ರೀತಿಯಲ್ಲಿ ತನ್ನ ಅಸ್ವಸ್ಥತೆಯ ಹಾಗೂ ಮರಣವನ್ನು ಎದುರಿಸುವ ರೀತಿಯಿಂದ ಆಶೀರ್ವದಿಸಲ್ಪಟ್ಟರು. ಆಕೆ ಸಾಯುವದಕ್ಕೆ ಒಂದು ವಾರದ ಮೊದಲು, ತನ್ನ ತಾಯಿ ಜಾರ್ಜಿಯ ಡುಬೊಯಿಸಳೊಂದಿಗೆ ಟೆಲಿಫೋನಿನಲ್ಲಿ ಮಾತಾಡಿದಳು. ತಾನು ಬೇಗನೇ ಸಾಯುವೆನೆಂದು ತಿಳಿದುಕೊಂಡು, ಕ್ಲೌಡೆಟ್ಟೆಯು ತನ್ನ ತಾಯಿಗೆ, "ಡ್ಯಾಡಿ ಮತ್ತು ನಾನು ನಿನಗಾಗಿ ಕಾಯುತ್ತಿರುವೆವು" ಎಂದು ಹೇಳಿದಳು, ದೇವರು ತನ್ನ ಮಕ್ಕಳಿಗೆ ಮಾಡಿದಂಥ ವಾಗ್ದಾನವು ಅಂಥದ್ದಾಗಿದೆ. ಕ್ಲೌಡೆಟ್ಟಳಿಗೆ ನಂಬಿಕೆಯು ಈಗ ನೋಟವಾಗಿ ರುವುದು, ಅದು ಉಳಿದಿರುವ ನಮಗೆ, ವಾಗ್ದಾನ ಮತ್ತು ಆ ವಾಗ್ದಾನವು ಪರಲೋಕದಲ್ಲಿ ನೆರವೇರುವದರ ಮಧ್ಯದಲ್ಲಿ ಸಹಿಸುವದಕ್ಕಾಗಿರುತ್ತದೆ.

ಸಂಬಂಧಪಟ್ಟ ತಂದೆಯ ಅನುಭವವು ನಾವು ಯೇಸುವಿನಲ್ಲಿ ನಮ್ಮ ನಂಬಿಕೆಯಲ್ಲಿ ನಾವು ಬೆಳೆಯುವಂತೆ ಒಂದು ಮಾದರಿಯಾಗಿ ಕೆಲಸ ಮಾಡುವುದು. ಕಥೆಯ ಪ್ರಾರಂಭದಲ್ಲಿ, ಈ ತಂದೆಗೆ ಯೇಸುವಿನ ಬಳಿಗೆ ಬಂದು ತನ್ನ ಮಗನ ಜೀವಕ್ಕಾಗಿ ಬೇಡಿಕೊಳ್ಳುವಷ್ಟು ನಂಬಿಕೆ ಇತ್ತು. ಅವನ ನಂಬಿಕೆಯು ಬಹುಶಃ "ನನ್ನಲ್ಲಿದೆ - ಏನನ್ನೂ ಕಳೆದು ಕೊಳ್ಳ ಬೇಕಾಗಿಲ್ಲ" ಎಂದು ವಿಧಾನದ್ದಾಗಿತ್ತು. ಆಗ, ಯೇಸುವಿನೊಂದಿಗೆ ಮಾತಾಡಿದ ನಂತರ,

ಅವನು "ಯೇಸು ತನಗೆ ಹೇಳಿದ ಮಾತನ್ನು ನಂಬಿದನು" (4:50). ಅಂತಿಮವಾಗಿ, ತನ್ನ ಮಗನು ಜೀವಿಸುತ್ತಿದ್ದಾನೆ ಎಂಬುದನ್ನು ಪ್ರತ್ಯಕ್ಷದರ್ಶಿಗಳಿಂದ ಕೇಳಿದ ನಂತರ, "ಅವನೂ ಅವನ ಮನೆಯವರೆಲ್ಲರೂ ಆತನನ್ನು ನಂಬಿದರು" (4:53). ಅವನು ನಿರಾಶೆಯ ನಿರೀಕ್ಷೆ ಯಿಂದ ಭರವಸೆಯ ನಂಬಿಕೆಗೆ ಚಲಿಸಿದಂತೆ ಅವನ ನಂಬಿಕೆಯ ಪ್ರಗತಿಯನ್ನು ಗಮನಿಸಿರಿ. ನಂಬಿಕೆಯು, ಅವನು ಪ್ರದರ್ಶಿಸಿದಂತೆ, ಕಠಿಣವಾದದ್ದು, ಬಹಳ ಸಲ ಗಟ್ಟಿಯಾಗಿರದೇ ಇರುವಂಥದ್ದು, ನಂಬಿಕೆಯು ನಂಬಿಕೆಯ ಮೇಲೆ ಕಟ್ಟಲ್ಪಡುವ ಪ್ರಗತಿಯಲ್ಲಿದ್ದು ಆಗಿರುತ್ತದೆ.

## ಮುಕ್ತಾಯ

ರಾಜಕೀಯ ಅಧಿಕಾರಿಯು ಮತ್ತು ಯೇಸುವಿನ ಕಥೆಯನ್ನು ಮುಗಿಸುವ ಮೊದಲು ಒಂದು ಕೊನೆಯ ಸತ್ಯವನ್ನು ಒತ್ತಿ ಹೇಳುವ ಅಗತ್ಯತೆಯಿರುತ್ತದೆ. ಯೇಸುವಿನ ಮುಖದೊಳಗೆ ನೀವು ಆಳವಾಗಿ ನೋಡಬೇಕೆಂದು ನಾವು ಬಯಸುತ್ತೇನೆ. ನೀವು ಅಲ್ಲಿ ನೋಡುವಂಥದ್ದು ನಿಮ್ಮ ಸ್ವಂತ ನಿರೀಕ್ಷೆಯನ್ನು ಉರಿಯುವಂತೆ ಮಾಡುವುದು ಮತ್ತು ನಿಮ್ಮನ್ನು ನಂಬಿಕೆಯ ದಿಕ್ಕಿನಲ್ಲಿ ಚಲಿಸುವಂತೆ ಮಾಡುವದು.

ಮೊದಲನೆಯದು, ಸತ್ಯದ ಮುಖವನ್ನು ನೋಡುವಿರಿ. ಯೇಸುವು ಈ ಸಂದರ್ಶನದಲ್ಲಿ ಆರಾಮದಾಯಕ ಸುಳ್ಳಿನೊಂದಿಗೆ ಜೀವಿಸಲಿಕ್ಕೆ ಬಿಡುವದನ್ನು ನಿರಾಕರಿಸುತ್ತಾನೆ. ಯಾವುದೋ ಒಂದು ನೋವಿನಿಂದ ನಮ್ಮ ಸ್ವಾತಂತ್ರ್ಯಕ್ಕಿಂತ ಹೆಚ್ಚು ಮಹತ್ವದ್ದಾಗಿದೆ: ಅದು ದೇವರೊಂದಿಗೆ ನಮ್ಮ ಸಂಬಂಧ ಕ್ರೈಸ್ತರಾಗಿ, ನಾವು ನೋವು ರಹಿತ ಜೀವಿತ ದೊಂದಿಗಿನ ನಮ್ಮ ಸಮಾಜದ ಮನೋ ದುಃಖವು, ಸತ್ಯಕ್ಕೆ ನಮ್ಮ ಸಮರ್ಪಣೆಯನ್ನು ಮೊಬ್ಬಾಗಿಸಲು ಬಿಡಬಾರದು. ಎಲ್ಲಾ ಜನರಿಗಾಗಿ ಜೀವನದಲ್ಲಿ ಅತೀ ದೊಡ್ಡ ವಿಷಯವು ಅವರ ಆತ್ಮಗಳ ರಕ್ಷಣೆಯಾಗಿರುವುದು. ಯೇಸುವು ಇದನ್ನು ಎಲ್ಲಾ ಸಮಯಗಳಲ್ಲಿ ತನ್ನ ದೃಷ್ಟಿಯಲ್ಲಿಟ್ಟುಕೊಂಡಿದ್ದನು; ನೀನು ಮತ್ತು ನಾನು ಅದಕ್ಕಿಂತ ಕಡಿಮೆಯಾದದ್ದನ್ನು ಮಾಡ ಲಾರೆವು.

ಎರಡನೆಯದು, ಕರುಣೆಯುಳ್ಳ ಮುಖವನ್ನು ನೋಡಿರಿ, "ವಾಕ್ಯವೆಂಬಾತನು ನರಾ ವತಾರ ಎತ್ತಿದ್ದರಿಂದ" ಯೇಸುವು ಅದನ್ನು ಸತತವಾಗಿ ಪ್ರದರ್ಶಿಸಿದನು. ಮಾನವ ಪರಿಸ್ಥಿತಿಯೊಂದಿಗೆ ಗುರುತಿಸಿಕೊಳ್ಳಲು ಆತನು ಶಕ್ತನಾಗಿದ್ದನು, ನಿತ್ಯತ್ವದ ಹಿನ್ನೆಲೆಯಲ್ಲಿ, ಚಿಕ್ಕಬಾಲಕನ ಗುಣಪಡಿಸುವಿಕೆಯು ತಪ್ಪಿಸಲಾಗದಂಥದ್ದನ್ನು ಮಾತ್ರ ತಡಮಾಡಿತು. ಅನಂತರ ಒಂದು ದಿನ ಬಾಲಕನು ಸಾಯುವನು, ನಿತ್ಯತ್ವದ ಹಿನ್ನೆಲೆಯಲ್ಲಿ ಅದು ಬಹಳ ವಾಗಿ ಭಿನ್ನತೆ ಮಾಡಿತೆಂದು ನಾನು ಸಂಶಯ ಪಡುತ್ತೇನೆ; ಆದರೆ ಮಾನವ ಜೀವಿಗಳು ಪ್ರಿಯರು ಸಾಯುವಾಗ ಆಳವಾಗಿ ಗೋಳಾಡುವರು. ಯೇಸುವು ಬಾಲಕನ ತಂದೆಯ ಕಹಿಯಾದ ದುಃಖವನ್ನು ಅರ್ಥಮಾಡಿಕೊಂಡನು ಮತ್ತು ಮಗನನ್ನು ಗುಣಪಡಿಸಲು ಕರುಣೆಯಿಂದ ಕಾರ್ಯಮಾಡಿದನು.

ಅಂತಿಮವಾಗಿ, ನಿರೀಕ್ಷೆಯ ಮುಖವನ್ನು ನೋಡಿರಿ. ನಮ್ಮ ಎಲ್ಲಾ ರೋಗಗಳನ್ನು ಗುಣಪಡಿಸುವೆನೆಂದು ಎಂದೂ ವಾಗ್ದಾನ ಮಾಡಲಿಲ್ಲ, ಆದರೆ ಆತನು ಹೋಗಿ ನಮಗಾಗಿ ಒಂದು ಸ್ಥಳವನ್ನೂ ಸಿದ್ಧಮಾಡುವೆನೆಂದು ವಾಗ್ದಾನ ಮಾಡಿದನು (ಯೋಹಾನ 14:2). ಪ್ರತಿಯೊಂದನ್ನು ನಮಗಾಗಿ ಸುಲಭಗೊಳಿಸುತ್ತೇನೆಂದು ಆತನು ಎಂದೂ ವಾಗ್ದಾನ ಮಾಡಲಿಲ್ಲ, ಆದರೆ ಯಾವಾಗಲೂ ನಮ್ಮೊಂದಿಗಿರುವೆನೆಂದು ವಾಗ್ದಾನ ಮಾಡಿದನು (ಮತ್ತಾಯ 28:20). ತನ್ನಲ್ಲಿ ನಮ್ಮ ನಂಬಿಕೆಯನ್ನು ಇಡುವದಕ್ಕೆ ಮತ್ತು ಕೆಲವು ಸಲ ಜೀವನದ ಭಯಪಡಿಸುವ ರಾತ್ರಿಗಳ ಮುಖಾಂತರ ತನ್ನನ್ನು ಹಿಂಬಾಲಿಸಬೇಕೆಂದು ಆತನು ನಮ್ಮನ್ನು ಕರೆದಿದ್ದಾನೆ, ಯೇಸುವು ನಮ್ಮ ನಂಬಿಕೆಗೆ ಯೋಗ್ಯನು ಎಂದು ಯೋಹಾನನು ಘೋಷಿಸಿದನು ಮತ್ತು ನಾವು ನಂಬುತ್ತೇವೆ!

ಟಿಪ್ಪಣಿಗಳು

[1]ಪಾಲೆಸ್ತೀನ ನಕಾಶೆ ನೋಡಿರಿ. [2]ನೋಡಿರಿ. 2:23, 24; 6:26. [3]Henri J. M. Nouwen, *The Wounded Healer* (Garden City, N.Y.: Image Books, 1972), 92-93. [4]"ಏಳನೆಯ ತಾಸು" ಯೆಹೂದಿ ಸಮಯದ ಪ್ರಕಾರ 1.00 p.m. ಇಲ್ಲವೇ ರೋಮನ್ ಸಮಯದ ಪ್ರಕಾರ 7.00 p.m.